## ಶಿಲೆಯೊಂದು ರೂಪ ಮೂರು

ಕಲ್ಪತರುನಾಡು ತುಮಕೂರಿಗೆ ಆಗಮಿಸಿದವರು ತ್ರಿವಿಧ ದಾಸೋಹ ಕೇಂದ್ರ ಶ್ರೀಕ್ಷೇತ್ರ ಸಿದ್ಧಗಂಗಾಮಠಕ್ಕೆ ಭೇಟಿ ನೀಡದೇ ಇರಲಾರರು. ಹಾಗೆ ಭೇಟಿ ನೀಡಿದವರು ಮಠದ ಪ್ರಾಂಗಣದಲ್ಲಿರುವ ಈ ಶಿಲೆಯನ್ನು ನೋಡದೇ ಹೋಗಿರಲಾರರು. ಈ ಬೃಹತ್ ಶಿಲೆಯ ವೈಶಿಷ್ಟ್ಯವೆಂದರೆ ಒಂದೇ ಶಿಲೆಯಲ್ಲಿ ನಂದಿ, ಶತಾಯುಷಿ ಶ್ರೀ ಶಿವಕುಮಾರಸ್ವಾಮೀಜಿ ಹಾಗೂ ಶ್ರೀ ಬಸವೇಶ್ವರರ ರೂಪಗಳನ್ನು ಕೆತ್ತಲಾಗಿದ್ದು, ಮಠಕ್ಕೆ ಆಗಮಿಸುವ ಭಕ್ತರನ್ನು ತಮ್ಮತ್ತ ಸೆಳೆಯುತ್ತಿವೆ.

**-ಪ.ನಾ.ಹಳ್ಳಿ ಹರೀಶ್ ಕುಮಾರ್,**
**ತುಮಕೂರು**





## ಹಗಣ ಕಟ್ಟುವುದು

ಹೊನ್ನಾವರ ತಾಲ್ಲೂಕಿನ ಮಾವಿನ ಕುರ್ವೆ ಮತ್ತು ಅನಿಲಗೋಡ ಎಂಬ ಗ್ರಾಮದಲ್ಲಿ ಸುಮಾರು 500 ವರ್ಷಗಳಿಗೂ ಪುರಾತನವಾದ ಆಚರಣೆ ಬಂಡಿ ಹಬ್ಬ. ಇಲ್ಲಿ ಆ ದಿನ ದೇವರಿಗೆ ಹರಕೆ ಹೊತ್ತ ಜನರು ವಿಶೇಷ ರೀತಿಯ ವೇಷಭೂಷಣ ತೊಟ್ಟು ದೇವರಿಗೆ ಹರಕೆ ಹೊರುವುದರ ಮೂಲಕ ಹಗಣವನ್ನು ಕಟ್ಟುವುದು ವಾಡಿಕೆ. ಇವರು ಆ ದಿನ ಮನೆಮನೆಗೆ ಹೋಗಿ ಸಂಗ್ರಹಿಸಿದ ಅಕ್ಕಿ, ತೆಂಗಿನ ಕಾಯಿ ಇನ್ನಿತರ ವಸ್ತುಗಳನ್ನು ಅರ್ಘ ದೇವರಿಗೆ ನೀಡಿ ತಮ್ಮ ಸೇವೆಯನ್ನು ಸಲ್ಲಿಸುತ್ತಾರೆ. ಇವರು ಧರಿಸುವ ವೇಷಭೂಷಣ ವಿಶಿಷ್ಟವಾಗಿದ್ದು ಪುರಾತನ ಕಾಲದಿಂದಲೂ ಈ ರೀತಿಯ ಆಚರಣೆ ವಾಡಿಕೆಯಾಗಿ ಬಂದಿದೆ.

**-ಬಳಕೂರು ವಿ.ಎಸ್.ನಾಯಕ್,**
**ಬೆಂಗಳೂರು**

## ಅಪರೂಪದ ಆಟಿಕೆಗಳು

ಸುಮಾರು ನೂರು ವರ್ಷಗಳಷ್ಟು ಹಿಂದಿನ ಹಿತ್ತಾಳೆಯ ಆಟಿಕೆಗಳಾದ ಒಲೆ, ಇಡ್ಲಿ ಪಾತ್ರೆ, ಮೊರ, ಜರಡಿ ಬೀಸುವಕಲ್ಲು ಮೊದಲಾದ ವಸ್ತುಗಳು ನಮ್ಮ ಮನೆಯಲ್ಲಿ ಇಂದಿಗೂ ಸುಸ್ಥಿತಿಯಲ್ಲಿವೆ. ಪ್ರತಿ ನವರಾತ್ರಿ ಹಬ್ಬದಲ್ಲಿ ಒಮ್ಮೆ ಹುಣಸೆಹಣ್ಣಿನಿಂದ ತೊಳೆದು ಬೊಂಬೆ ಇಡುವಾಗ ಜೋಡಿಸಿಟ್ಟರೆ ಸಣ್ಣ ಅಡುಗೆಮನೆಯ ಮಾದರಿಯೇ ಕಣ್ಣ ಮುಂದೆ ಬರುತ್ತದೆ. ಎಲ್ಲವೂ ಮಯವಾಗಿರುವ ಪ್ಲಾಸ್ಟಿಕ್ ಈಗಿನ ಕಾಲದಲ್ಲಿ ಈ ರೀತಿಯ ಹಿತ್ತಾಳೆಯ ಆಟದ ಸಾಮಾನುಗಳು ಸಿಗುವುದು ಅಪರೂಪ. ಹೀಗಾಗಿ ಇಂತಹ ಪುರಾತನ ಸಾಮಗ್ರಿಗಳನ್ನು ಹಾಳುಮಾಡದೆ ಕಾಪಾಡಿಕೊಂಡು ಬಂದಿದ್ದೇವೆ.

**-ಸವಿತಾ ಸಚ್ಚಿದಾನಂದ, ಚಿಕ್ಕಮಗಳೂರು**

